# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆ ಮತ್ತು ಸವಾಲುಗಳು

ಎಂ. ಚಿಕ್ಕಣ್ಣ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ಭಾಷಾ ವಿಭಾಗ, ಎಸ್.ಡಿ. ಯು. ಐ. ಎಂ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

DOI: https://doi.org/10.5281/zenodo.18699221

**ABSTRACT:**

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆಗಳು ಮತ್ತು ಸವಾಲುಗಳು ಮುಖ್ಯವಾಗಿ ವಸಾಹತೋತ್ತರ ಭಾರತದ ವಾಸ್ತವ, ಜಾಗತೀಕರಣದ ಪ್ರಭಾವ, ಸಾಮಾಜಿಕ ನ್ಯಾಯದ ಅನ್ವೇಷಣೆ, ಡಿಜಿಟಲೀಕರಣದ ಸವಾಲುಗಳು, ಮತ್ತು ಸಾಂಪ್ರದಾಯಿಕ ಹಾಗೂ ಆಧುನಿಕ ಮೌಲ್ಯಗಳ ನಡುವಿನ ಸಂಘರ್ಷವನ್ನು ಒಳಗೊಂಡಿವೆ ಎಂದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯದ ಪ್ರಮುಖ ಸಮಸ್ಯೆಗಳಲ್ಲಿ ಮುಖ್ಯವಾಗಿ ಯುವಜನರಲ್ಲಿ ಕಡಿಮೆಯಾಗುತ್ತಿರುವ ಓದುವಿಕೆ, ಆಂಗ್ಲ ಭಾಷೆಯ ಪ್ರಭಾವ, ಗಣಕೀಕರಣದಲ್ಲಿನ ಸವಾಲುಗಳು, ಪ್ರಕಟಣೆ ಮತ್ತು ವಿತರಣೆ ಸಮಸ್ಯೆಗಳು, ಮತ್ತು ಕನ್ನಡವನ್ನು ಕೇವಲ ಶಿಕ್ಷಣ ಮಾಧ್ಯಮವಾಗಿ ನೋಡದೆ, ಬದುಕಿನ ಮುಖ್ಯವಾಹಿನಿಗೆ ತರುವಲ್ಲಿನ ಹಿನ್ನಡೆ, ಜಾಗತೀಕರಣ ಮತ್ತು ನಗರೀಕರಣದಿಂದಾಗಿ ಆಂಗ್ಲ ಭಾಷೆಯ ಬಳಕೆ ಹೆಚ್ಚಾಗುತ್ತಿರುವುದು, ಕನ್ನಡ ಪುಸ್ತಕಗಳ ಮಾರಾಟದಲ್ಲಿ ಕುಸಿತ ಕಂಡಿರುವುದು ಮತ್ತು ಡಿಜಿಟಲ್ ಯುಗದಲ್ಲಿ ಕನ್ನಡದ ಅಳವಡಿಕೆಗೆ ತಂತ್ರಜ್ಞಾನದ ಬೆಂಬಲದ ಕೊರತೆ, ಕನ್ನಡ ಸಾಹಿತ್ಯದಲ್ಲಿ ಓದುಗರ ಕೊರತೆ ಮತ್ತು ಮಾರುಕಟ್ಟೆ ಸಮಸ್ಯೆಗಳು ಗಂಭೀರವಾಗಿದ್ದು, ಮುಖ್ಯವಾಗಿ ಡಿಜಿಟಲ್ ಯುಗದಲ್ಲಿ ಓದುವ ಅಭ್ಯಾಸ ಕಡಿಮೆಯಾಗುತ್ತಿರುವುದು, ಕಿರಿಯ ಪೀಳಿಗೆಯ ಆಸಕ್ತಿ ಕಡಿಮೆಯಾಗಿರುವುದು, ವಿಜ್ಞಾನ-ತಂತ್ರಜ್ಞಾನ ಸಾಹಿತ್ಯಕ್ಕೆ ಬರಹಗಾರರ ಕೊರತೆ, ಮತ್ತು ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿನ ಸವಾಲುಗಳು ಪ್ರಮುಖವಾಗಿವೆ. ಡಿಜಿಟಲ್ ಯುಗ: ಸ್ಮಾರ್ಟ್‌ಫೋನ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳ ಹೆಚ್ಚಳದಿಂದಾಗಿ ಓದುವ ಆಸಕ್ತಿ ಕಡಿಮೆಯಾಗಿದೆ. ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ರಮಗಳ ಕೊರತೆ ಮತ್ತು ಸಾಹಿತ್ಯದ ಒಡನಾಟವಿಲ್ಲದ ಜನರನ್ನು ತಲುಪುವಲ್ಲಿನ ಸವಾಲುಗಳು.

ಆಧುನಿಕ ಕನ್ನಡ ಸಾಹಿತ್ಯವು ಡಿಜಿಟಲೀಕರಣ, ಜಾಗತೀಕರಣ, ಮತ್ತು ಮಾಹಿತಿ ತಂತ್ರಜ್ಞಾನದ ಪ್ರಭಾವದಿಂದಾಗಿ ಹೊಸ ಸವಾಲುಗಳನ್ನು ಎದುರಿಸುತ್ತಿದೆ, ಮುಖ್ಯವಾಗಿ ಕನ್ನಡದ ಬಳಕೆಯನ್ನು ಹೆಚ್ಚಿಸುವುದು, ಯುನಿಕೋಡ್‌ನಂತಹ ತಂತ್ರಜ್ಞಾನಗಳನ್ನು ಅಳವಡಿಸುವುದು, ಸಾಮಾಜಿಕ ಜಾಲತಾಣಗಳ ಸದುಪಯೋಗ, ಸಾಹಿತ್ಯ ಸಂಶೋಧನೆಯ ಕುಸಿತ, ಹೊಸ ಬಗೆಯ ಸಾಹಿತ್ಯ ಪ್ರಕಾರಗಳ ಸೃಷ್ಟಿ, ಮಹಿಳಾ ಸಾಹಿತ್ಯದ ವಿಶ್ಲೇಷಣೆ ಮತ್ತು ಪರಂಪರೆಯೊಂದಿಗೆ ಡಿಜಿಟಲ್ ಯುಗವನ್ನು ಬೆಸೆಯುವಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ. ಡಿಜಿಟಲ್ ಮತ್ತು ತಂತ್ರಜ್ಞಾನದ ಸವಾಲುಗಳು: ಯುನಿಕೋಡ್ ಅಳವಡಿಕೆ: ಕಂಪ್ಯೂಟರ್ ಮತ್ತು ಮೊಬೈಲ್‌ಗಳಲ್ಲಿ ಯುನಿಕೋಡ್ ಕನ್ನಡದ ಬಳಕೆಯ ಪ್ರಮಾಣ ಹೆಚ್ಚಾಗಿದ್ದರೂ, ಒ.ಸಿ.ಆರ್ ತಂತ್ರಾಂಶದ ಅಭಿವೃದ್ಧಿ ಮತ್ತು ಹಸ್ತಪ್ರತಿಗಳ ಡಿಜಿಟಲೀಕರಣ ದೊಡ್ಡ ಸವಾಲಾಗಿದೆ. ಡಿಜಿಟಲೀಕರಣ ಮತ್ತು ಹೊಸ ತಂತ್ರಜ್ಞಾನದ ಸವಾಲು: ಸಾಹಿತ್ಯ ರಚನೆ, ಪ್ರಸಾರ ಮತ್ತು ವಿಮರ್ಶೆಯಲ್ಲಿ ಡಿಜಿಟಲ್ ಮಾಧ್ಯಮಗಳ ಪ್ರವೇಶ. ಹಳೆಯ ಸಾಹಿತ್ಯ ಪರಂಪರೆಯನ್ನು ಡಿಜಿಟಲ್ ಯುಗಕ್ಕೆ ಒಳತರುವ ಸವಾಲು. ಉಚಿತವಾಗಿ ಲಭ್ಯವಿರುವ ಮುಕ್ತ ತಂತ್ರಾಂಶಗಳನ್ನು ಕನ್ನಡಕ್ಕೆ ತರುವುದರಲ್ಲಿ, ಆಸಕ್ತ ಕನ್ನಡಿಗರ ಗುಂಪುಗಳು ಹಲವು ಮಹತ್ವದ ಸಾಧನೆಗಳನ್ನು ಮಾಡಿವೆ ಅವುಗಳ ಸಾಧನೆಯನ್ನು ಗುರುತಿಸಬೇಕಾಗಿದೆ. ಇಂದು ಈ ತೆರನಾದ ತಾಂತ್ರಿಕ ಕೆಲಸ ಮಾಡುವ ಇಂತಹ ಸಮುದಾಯಗಳೊಡನೆ ಕೈಜೋಡಿಸುವುದು, ಹೊಸ ಪ್ರಯತ್ನಗಳನ್ನು ಬೆಂಬಲಿಸುವುದು ನಾವೆಲ್ಲರೂ ಮಾಡಬೇಕಾದ ಕೆಲಸವಾಗಬೇಕಾಗಿದೆ.

**KEYWORDS:**
ತಂತ್ರಜ್ಞಾನ, ಯಜಮಾನ ಭಾಷೆ, ದ್ವಿಭಾಷಿಕತೆ, ಬಹುಭಾಷಿಕತೆ, ಡಿಜಿಟಲ್ ಯುಗ, ಆಧುನಿಕ ಕನ್ನಡ ಸಾಹಿತ್ಯ.

**ಪೀಠಿಕೆ:** ಭಾಷೆ ನಿತ್ಯ ಪರಿವರ್ತನಾಶೀಲವಾದುದು, ಹಲವು ಅವಸ್ಥೆಗಳನ್ನು ತಳೆದು ರೂಪಾಂತರಗೊಳ್ಳುವುದು ಭಾಷೆಯ ಜಾಯಮಾನ, ಭಾಷೆಯೆಂಬ ಬೆಳಕು ಜೀವನದ ಉದ್ದಕ್ಕೂ ಬೆಳಗದಿದ್ದರೆ ಲೋಕವೆಲ್ಲವೂ ಕತ್ತಲಿನಿಂದ ತುಂಬಿಹೋಗುತ್ತಿತ್ತು ಎಂಬ ದಂಡಿಯ ಮಾತು ಭಾಷೆಗಿರುವ ಮಹತ್ವವನ್ನು ತಿಳಿಸುತ್ತದೆ, ಭಾಷೆ ಒಂದು ಅರಿವಿನ ಸಾಧನ.

ಕನ್ನಡ ಸಾಹಿತ್ಯದ ಪ್ರಮುಖ ಸಮಸ್ಯೆಗಳೆಂದರೆ ಯುವಜನರಲ್ಲಿ ಕಡಿಮೆಯಾಗುತ್ತಿರುವ ಓದುವಿಕೆ, ಆಂಗ್ಲ ಭಾಷೆಯ ಪ್ರಭಾವ, ಗಣಕೀಕರಣದಲ್ಲಿನ ಸವಾಲುಗಳು, ಪ್ರಕಟಣೆ ಮತ್ತು ವಿತರಣೆ ಸಮಸ್ಯೆಗಳು, ಮತ್ತು ಕನ್ನಡವನ್ನು ಕೇವಲ ಶಿಕ್ಷಣ ಮಾಧ್ಯಮವಾಗಿ ನೋಡದೆ, ಬದುಕಿನ ಮುಖ್ಯವಾಹಿನಿಗೆ ತರುವಲ್ಲಿನ ಹಿನ್ನಡೆ. ಜಾಗತೀಕರಣ ಮತ್ತು ನಗರೀಕರಣದಿಂದಾಗಿ ಆಂಗ್ಲ ಭಾಷೆಯ ಬಳಕೆ ಹೆಚ್ಚಾಗುತ್ತಿರುವುದು, ಕನ್ನಡ ಪುಸ್ತಕಗಳ ಮಾರಾಟದಲ್ಲಿ ಕುಸಿತ, ಮತ್ತು ಡಿಜಿಟಲ್ ಯುಗದಲ್ಲಿ ಕನ್ನಡದ ಅಳವಡಿಕೆಗೆ ತಂತ್ರಜ್ಞಾನದ ಬೆಂಬಲದ ಕೊರತೆ ಪ್ರಮುಖ ಸವಾಲುಗಳಾಗಿವೆ.

ಕನ್ನಡ ಸಾಹಿತ್ಯದಲ್ಲಿ ಓದುಗರ ಕೊರತೆ ಮತ್ತು ಮಾರುಕಟ್ಟೆ ಸಮಸ್ಯೆಗಳು ಗಂಭೀರವಾಗಿದ್ದು, ಮುಖ್ಯವಾಗಿ ಡಿಜಿಟಲ್ ಯುಗದಲ್ಲಿ ಓದುವ ಅಭ್ಯಾಸ ಕಡಿಮೆಯಾಗುತ್ತಿರುವುದು, ಕಿರಿಯ ಪೀಳಿಗೆಯ ಆಸಕ್ತಿ ಕಡಿಮೆಯಾಗಿರುವುದು, ವಿಜ್ಞಾನ–ತಂತ್ರಜ್ಞಾನ ಸಾಹಿತ್ಯಕ್ಕೆ ಬರಹಗಾರರ ಕೊರತೆ, ಮತ್ತು ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿನ ಸವಾಲುಗಳು ಪ್ರಮುಖವಾಗಿವೆ. ಕನ್ನಡ ಸಾಹಿತ್ಯದಲ್ಲಿ ಓದುಗರ ಕೊರತೆ ಮತ್ತು ಮಾರುಕಟ್ಟೆ ಸಮಸ್ಯೆಗಳು ಗಂಭೀರವಾಗಿದ್ದು, ಮುಖ್ಯವಾಗಿ ಯುವ ಪೀಳಿಗೆಯ ಗಮನ ಸೆಳೆಯುವಲ್ಲಿ ವೈಫಲ್ಯ, ಡಿಜಿಟಲ್ ಮಾಧ್ಯಮಗಳ ಸ್ಪರ್ಧೆ, ಕೃತಿಗಳ ಕೊರತೆ, ವಿಮರ್ಶಾತ್ಮಕ ಕೊರತೆ, ಮತ್ತು ಮಾರುಕಟ್ಟೆ ತಂತ್ರಗಳ ಕೊರತೆಯಿಂದ ಉಂಟಾಗಿವೆ, ಇದರಿಂದಾಗಿ ಹೊಸ ಬರಹಗಾರರು ಪ್ರೋತ್ಸಾಹ ಪಡೆಯುತ್ತಿಲ್ಲ ಮತ್ತು ಸಾಹಿತ್ಯದ ಪ್ರಸಾರ ಕುಗ್ಗುತ್ತಿದೆ. ಇಪ್ಪತ್ತನೆ ಶತಮಾನದ ಆರಂಭ ಕಾಲದಲ್ಲಿ ವಸಾಹತು ಆಡಳಿತಕ್ಕೆ ಒಳಗಾಗಿದ್ದ ಸಣ್ಣಪುಟ್ಟ ದೇಶಗಳಲ್ಲಿ ದೇಶೀಯ ಭಾಷೆಗಳು ವಸಾಹತುಗಾರರ ಭಾಷೆಯ ಪ್ರಭಾವಗಳಿಂದ ಬಿಡುಗಡೆ ಪಡೆದು ತಮ್ಮ ಸ್ವಂತಿಕೆಯನ್ನು ಹೇಗೆ ಕಾಯ್ದುಕೊಳ್ಳಬೇಕೆಂದು ಅರಿತುಕೊಳ್ಳುವ ವ್ಯವಸ್ಥಿತ ಪ್ರಯತ್ನಗಳು ಜರುಗಿದ್ದನ್ನು ನೋಡುತ್ತೇವೆ. ಈ ಇಕ್ಕಟ್ಟನ್ನು ಅನುಭವಿಸುತ್ತಿದ್ದ ಬಹುಪಾಲು ಭಾಷಾ ಸಮುದಾಯಗಳು ತಮ್ಮ ತಮ್ಮ ಭಾಷೆಗಳನ್ನಾಡುವ ಜನರು ಮೊದಲು ಸಮ್ಮೇಳನಗಳನ್ನು ಆ ಸಂದರ್ಭದಲ್ಲಿ ಆಯೋಜಿಸಿದ್ದಕ್ಕೆ ದಾಖಲೆಗಳಿವೆ. ಕನ್ನಡ ಹಾಗೂ ಕನ್ನಡದಂತ ಭಾಷೆಗಳು ತಮ್ಮ ತಮ್ಮ ಸಮುದಾಯಗಳ ಚಹರೆಯಾಗಿ ಉಳಿದುಕೊಳ್ಳಬಲ್ಲವೇ? ಈ ಭಾಷೆಗಳು ಈಗ ಎದುರಿಸುತ್ತಿರುವ ಸವಾಲುಗಳಲ್ಲಿ ಕೆಲವು ಭಾಷಿಕ ನೆಲೆಯಲ್ಲಿದ್ದರೆ ಮತ್ತೆ ಕೆಲವು ರಾಜಕಾರಣದ ಫಲಿತಗಳಾಗಿವೆ, ಮೇಲಾಗಿ ತಂತ್ರಜ್ಞಾನದ ಪರಿಣಾಮಗಳೂ ಕಾಣತೊಡಗಿವೆ. ಈ ಹಿನ್ನೆಲೆಯಲ್ಲಿ ಕೆಲವು ಸಂಗತಿಗಳನ್ನು ನಾವು ಪರಿಶೀಲಿಸುವ ಅಗತ್ಯವಿದೆ.

**ಯಜಮಾನ ಭಾಷೆಯಾಗಿ ಕನ್ನಡ:** ನಾವೀಗ ಭಾಷೆಗಳ ಅಸ್ಮಿತೆಯನ್ನು ಕುರಿತು

ಮಾತನಾಡುತ್ತಿದ್ದೇವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಸಹಜವಾಗಿಯೇ ಭಾರತದಲ್ಲಿರುವ ಎಲ್ಲ ಭಾಷಾ ಸಮುದಾಯಗಳಿಗೂ ಒಂದೊಂದು ಆಡಳಿತ ಪ್ರದೇಶವನ್ನು ನೀಡುವುದು ಅಸಾಧ್ಯವೆಂಬುದು ಗೊತ್ತಾಗುವಂತಿತ್ತು. ಅಂದರೆ ಕೆಲವು ಆಯ್ದ ಭಾಷೆಗಳನ್ನು ಗಮನಿಸಿ ಅವುಗಳನ್ನು ಪ್ರಧಾನವಾಗಿಸಿ ಪ್ರಾಂತ್ಯಗಳನ್ನು ರಚಿಸಲಾಗಿದೆ. ಚಾರಿತ್ರಿಕವಾಗಿ ಕೆಲವು ಸೌಲಭ್ಯವನ್ನು ಪಡೆದಿದ್ದ ಭಾಷೆಗಳು, ಲಿಪಿಯಿದ್ದ ಭಾಷೆಗಳು ಈ ಅವಕಾಶವನ್ನು ಸಹಜವಾಗಿಯೇ ಪಡೆದುಕೊಂಡವು. ಆವರೆಗಿನ ಭಾರತದ ರಾಜಕೀಯ ಚರಿತೆಯ ಪ್ರಾಂತ್ಯ ವಿಭಜನೆ ಕ್ರಮ ಕೂಡ ಈ ಪ್ರಾಂತ್ಯಗಳ ರಚನೆಗೆ ಅಗತ್ಯವಾದ ಪರಾಮರ್ಶನದ ಬೇರೆ ಬಿಂದುವನ್ನು ಒದಗಿಸಿದೆ.

ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಪ್ರತಿ ಪ್ರಾಂತ್ಯದಲ್ಲೂ ಪ್ರಧಾನ ಭಾಷೆಯೊಂದನ್ನು ಬಿಟ್ಟು ಭಾಷೆಗಳನ್ನಾಡುವ ಹಲವು ಸಮುದಾಯಗಳು ಸೇರಿಹೋಗಿದ್ದವು. ಈ ಭಾಷಾ ಸಮುದಾಯಗಳಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ. ಒಂದು: ಈ ಗುಂಪಿಗೆ ಸೇರಿದ ಸಮುದಾಯಗಳು ಆಡುತ್ತಿದ್ದ ಭಾಷೆಗಳಿಗೆ ಪ್ರತ್ಯೇಕವಾದ ಭಾಷಾವಾರು ಪ್ರಾಂತ್ಯಗಳು ಭಾರತದಲ್ಲಿ ಇದ್ದವು. ತಮಿಳು, ತೆಲುಗು, ಮರಾಠಿ, ಹಿಂದಿ ಮುಂತಾದವು ಈ ಬಗೆಯ ಭಾಷೆಗಳು. ಅಂದರೆ ಈ ಭಾಷೆಗಳಿಗೆ ಮೀಸಲಾದ ಪ್ರಾಂತ್ಯಗಳಿದ್ದವು. ಆದರೆ ಈ ಭಾಷೆಗಳನ್ನಾಡುವ ಜನರು ಬೇರೆ ಪ್ರಾಂತ್ಯಗಳಲ್ಲೂ ಹರಡಿ ಹೋಗಿದ್ದರು. ಎರಡು: ಈ ಗುಂಪಿನ ಭಾಷೆಗಳನ್ನು ಆಡುವ ಜನರು ಬಹುಮಟ್ಟಿಗೆ ಒಂದು ಪ್ರಾಂತ್ಯಕ್ಕೆ ಮಾತ್ರ ಸೀಮಿತರಾಗಿದ್ದರು. ಕೆಲವು ಭಾಷಾ ಸಮುದಾಯಗಳು ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಲ್ಲಿ ಇದ್ದುದ್ದಕ್ಕೂ ನಿದರ್ಶನಗಳಿವೆ. ಕೊಡಗು, ತುಳು ಮೊದಲ ಬಗೆಯ ಭಾಷೆಗಳಾದರೆ ಕೊಂಕಣಿ, ಲಂಬಾಣೀ ಎರಡನೆಯ ಬಗೆಯ ಭಾಷೆಗಳು. ಈ ನಿದರ್ಶನಗಳು ಕರ್ನಾಟಕಕ್ಕೆ ಸೇರಿವೆಯಾದರೂ ಈ ಮಾದರಿಯ ನಿದರ್ಶನಗಳು ಎಲ್ಲ ಭಾಷಾ ಪ್ರಾಂತ್ಯಗಳಲ್ಲೂ ಭಿನ್ನ ಪ್ರಮಾಣದಲ್ಲಿ ಕಾಣಸಿಗುತ್ತವೆ.

ಭಾಷೆಗಳು ಭಾಷಾವಾರು ಪ್ರಾಂತ್ಯ ರಚನೆಯ ಮೊದಲ ಹಂತದಲ್ಲಿ ನಿರೀಕ್ಷಿಸಲು ಸಾಧ್ಯವಾಗದಿದ್ದ ಕೆಲವು ವೈರುದ್ಧಗಳು ಈಗ ಭಾಷೆಗಳ ನಡುವಣ ಸಂಬಂಧದಲ್ಲಿ ಮುಂಚೂಣಿಗೆ ಬರತೊಡಗಿವೆ. ಒಂದೇ ಪ್ರಾಂತ್ಯದಲ್ಲಿ ಆ ಪ್ರಾಂತ್ಯ ಭಾಷೆಯು ಅಲ್ಲಿನ ಜನಸಮುದಾಯದ ಇತರ ಭಾಷೆಗಳಿಗೆ ಯಜಮಾನ ಭಾಷೆಯಾಗಿ ಸ್ಥಾಪಿತವಾಗಿರುವುದೇ ಈ ವೈರುಧ್ಯ. ಕರ್ನಾಟಕದಲ್ಲಿ ಕನ್ನಡ ಭಾಷೆ ಈ ಪಾತ್ರವನ್ನು ನಿರ್ವಹಿಸುತ್ತಿದೆ. ತುಳು, ಕೊಡಗು, ಕೊಂಕಣಿ, ಕೊರಗ ಲಂಬಾಣಿ ಕನ್ನಡದ ಯಜಮಾನ್ಯವನ್ನು ಅನುಭವಿಸತೊಡಗಿವೆ. ತಮ್ಮ ಪ್ರತ್ಯೇಕ ಅಸ್ತಿತ್ವಕ್ಕಾಗಿ ಕೆಲವು ಭಾಷಾ ಸಮುದಾಯಗಳು ಹೋರಾಟದ ಹಾದಿಯನ್ನು ತುಳಿದಿವೆ. ಶಿಕ್ಷಣ, ಆಡಳಿತ ಸಮೂಹ ಮಾಧ್ಯಮಗಳಲ್ಲಿ ಕನ್ನಡದ ಜೊತೆಗೆ ಈ ಭಾಷೆಗಳು ತಮ್ಮ ಇರುವಿಕೆಗಾಗಿ ಹುಡುಕಾಟ ನಡೆಸಬೇಕಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವುದು ಎಲ್ಲ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ಆರೋಗ್ಯಕರ ಎಂಬ ತತ್ವವನ್ನು ಕನ್ನಡದ ಮಟ್ಟಿಗೆ ಪಾಲಿಸಲು ಸಿದ್ಧವಿದ್ದೇವೆ ಆದರೂ ಅಲ್ಪಸಂಖ್ಯಾತ ಭಾಷೆಗಳ ವಿಷಯದಲ್ಲಿ ಈ ತರ್ಕವನ್ನು ಒಪ್ಪಲು ನಾವು ಸಿದ್ಧರಿರುವುದಿಲ್ಲ. ಇನ್ನೊಂದು ರಾಜ್ಯದ ಭಾಷೆಯನ್ನು ಆಡುವ ಸಮುದಾಯಗಳು ತಮ್ಮ ರಾಜ್ಯದಲ್ಲಿರುವಾಗ ಆ ಸಮುದಾಯಗಳ ಭಾಷಾ ಹಕ್ಕನ್ನು ಕಾಯ್ದುಕೊಳ್ಳಲು ನಾವು ಒತ್ತಾಸೆಯನ್ನು ನೀಡುತ್ತೇವೆ. ಹಾಗಿಲ್ಲದ ಭಾಷೆಗಳಿಗೆ ಆ ಸೌಲಭ್ಯವನ್ನು ಒದಗಿಸುವುದು ಈಗಂತೂ ಸಾಧ್ಯವಾಗಿಲ್ಲ. ಬರಲಿರುವ ದಶಕಗಳಲ್ಲಿ ಪ್ರಾಂತೀಯ ಭಾಗಗಳ ಈ ಯಜಮಾನ್ಯಸ್ಥ ವಾದ ಸವಾಲುಗಳು ಮುಂದೆ ಬರುವುದು ಅನಿವಾರ್ಯವಾಗಿದೆ. ಕನ್ನಡ

ಎದುರಿಸಬೇಕಾಗಿರುವ ಹೊಸ ಸವಾಲುಗಳಲ್ಲಿ ಇದೂ ಒಂದಾಗಿದೆ.

ರಾಜ್ಯಾಂಗ ಕರ್ತೃಗಳಿಗೆ ಈ ಸಮಸ್ಯೆಯ ಸುಳಿವು ಇರಲಿಲ್ಲವೆಂದಲ್ಲ. ಪ್ರತಿರಾಜ್ಯವೂ ತನ್ನ ಭೌಗೋಳಿಕ ಪ್ರದೇಶದಲ್ಲಿರುವ ಜನ ಸಮುದಾಯದ ಭಾಷೆಗಳ ಕಲಿಕೆ ಮತ್ತು ಬಳಕೆಗೆ ಅಗತ್ಯವಾದ ಪರಿಸರವನ್ನು, ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ಆದರೆ ಈ ಷರತ್ತಿನ ಪಾಲಕ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಚನೆ ನೀಡುವ ವ್ಯವಸ್ಥೆಯೊಂದು ಈಗ ಇಲ್ಲವಾಗಿದೆ. ಸಾಂಸ್ಕೃತಿಕವಾಗಿ ಈ ಭಾಷೆಗಳಿಗೆ ಆಯಾ ರಾಜ್ಯದಲ್ಲಿ ಪ್ರಾತಿನಿಧ್ಯವನ್ನು ಒದಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಈ ಅಲ್ಪಸಂಖ್ಯಾತ ಭಾಷೆಗಳ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿದೆ. ಆದರೆ ಇವು ಒಟ್ಟಾರೆಯಾಗಿ ಆಯಾ ಭಾಷಾ ಸಮುದಾಯಗಳ ಸಾಮಾನ್ಯ ಜನರ ಪ್ರಾತಿನಿಧ್ಯವನ್ನು ಒದಗಿಸಿಕೊಟ್ಟಿಲ್ಲವೆಂದೇ ಹೇಳಬಹುದು.

ಲಿಪಿಗಳೇ ಇಲ್ಲದ ಹತ್ತಾರು ಭಾಷೆಗಳನ್ನು ಆಧುನಿಕ ಜೀವನ ಕ್ರಮಕ್ಕೆ ಸನ್ನದ್ಧಗೊಳಿಸುವ ಉದ್ದೇಶದಿಂದ ಈ ಅಲ್ಪಸಂಖ್ಯಾತ ಭಾಷೆಗಳಿಗೆ ಅಗತ್ಯವಾದ ಮೂಲ ಸೌಲಭ್ಯ ರೂಪಿಸಿ ಕೊಡುವುದು ರಾಜ್ಯಗಳಿಗೆ ಸಾಧ್ಯವಾಗಿಲ್ಲ. ಇದರಿಂದ ಕನ್ನಡದ ಯಜಮಾನ್ಯವನ್ನು ಅಲ್ಪಸಂಖ್ಯಾತ ಭಾಷೆಗಳು ಅನುಭವಿಸುತ್ತಿವೆ. ಮುಂಬರುವ ದಶಕಗಳು ಪ್ರಾಂತೀಯ ಭಾಷೆಯಾಗಿ ಕನ್ನಡ ಈ ಅಧೀನ ಭಾಷೆಗಳ ಹಕ್ಕೊತ್ತಾಯಗಳನ್ನು ಈಡೇರಿಸಲು ಯಾವ ಪ್ರಯತ್ನಗಳನ್ನು ಕೈಗೊಳ್ಳಬೇಕೆಂಬುದನ್ನು ಯೋಚಿಸಬೇಕಾಗುತ್ತದೆ. ಒಳಗೊಳ್ಳುವ ವಿಧಾನವನ್ನು ಕನ್ನಡದಂತಹ ಭಾಷೆಗಳು ಪಾಲಿಸುವುದು ಅನಿವಾರ್ಯ. ಹತ್ತಿಕ್ಕುವ, ಹೊರಗಿಡುವ ವಿಧಾನವನ್ನು ಅನುಸರಿಸಿದರೆ ಈ ಭಾಷೆಗಳು ತೀವ್ರ ಕನ್ನಡ ವಿರೋಧವನ್ನು ಪಾಲಿಸಿದರೆ ಅಚ್ಚರಿಯಿಲ್ಲ. ಕನ್ನಡವನ್ನು ಎಚ್ಚರಿಕೆಯಿಂದ ಯೋಚಿಸಿದರೆ ಮಾತ್ರ ಅದರ ವ್ಯಾಪಕ ಬಳಕೆಗೆ ಅವಕಾಶಗಳು ದೊರಕುತ್ತವೆ. ಇಲ್ಲದಿದ್ದರೆ ಕನ್ನಡ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಮುಂದುವರೆಸುವಾಗ ಇನ್ನಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

**ದ್ವಿಭಾಷಿಕತೆ ಮತ್ತು ಬಹುಭಾಷಿಕತೆ:** ಕನ್ನಡ ಭಾಷೆ ಈಗ ಕರ್ನಾಟಕವೆಂಬ ಭೌಗೋಳಿಕ ಪ್ರದೇಶದಲ್ಲಿ ಸಾರ್ವಭೌಮ ಭಾಷೆಯಾಗಿಲ್ಲ. ಕನ್ನಡ ಮಾತನಾಡುವವರು ಇನ್ನೊಂದು ಭಾಷೆಯಲ್ಲಿ ಪರಿಣಿತಿಯನ್ನು ಪಡೆಯುವುದು, ಅನ್ಯ ಭಾಷಿಕರು ಕನ್ನಡವನ್ನು ಕಲಿತು ದ್ವಿಭಾಷಿಕರಾಗುವುದು ಹೆಚ್ಚಾಗುತ್ತಿದೆ. ಕರ್ನಾಟಕ ಭೌಗೋಳಿಕವಾಗಿ ತಮಿಳು, ತೆಲುಗು, ಮರಾಠಿ, ಮಲಯಾಳಂ, ಕೊಂಕಣಿ ಭಾಷೆಗಳನ್ನಾಡುವ ರಾಜ್ಯಗಳಿಗೆ ತೆರೆದುಕೊಂಡಿದೆ. ಅಲ್ಲದೆ ಈಗಾಗಲೇ ಹೇಳಿದಂತೆ ಹಿಂದಿ, ಉರ್ದು, ಪಂಜಾಬಿ, ಕಾಶ್ಮೀರಿ ಮುಂತಾದ ರಾಜ್ಯಾಂಗದ ಮಾನ್ಯತೆ ಪಡೆದ ಭಾಷೆಗಳನ್ನಾಡುವ ಜನರು ಬಹುಕಾಲದಿಂದಲೂ ಇಲ್ಲಿ ವಾಸಿಸುತ್ತಿದ್ದಾರೆ. ತುಳು, ಕೊಡಗು ಮುಂತಾದ ಈ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾದ ಭಾಷೆಗಳನ್ನಾಡುವ ಜನರು ಇಲ್ಲಿದ್ದಾರೆ. ಇದೆಲ್ಲವೂ ಕಾರಣವಾಗಿ ಈ ರಾಜ್ಯದಲ್ಲಿ ದ್ವಿಭಾಷಿಕ ಮತ್ತು ಬಹುಭಾಷಿಕ ಸಮುದಾಯಗಳು ಅಧಿಕ ಪ್ರಮಾಣದಲ್ಲಿವೆ. ಈ ಸಮುದಾಯಗಳ ಪ್ರಮಾಣ ಕೂಡ ಹೆಚ್ಚಾಗುತ್ತಿದೆ. ಶೈಕ್ಷಣಿಕ ಕಾರಣಗಳಿದ್ದ ಇಂಗ್ಲೀಷನ್ನು ಕಲಿಯುವವರ ಸಂಖ್ಯೆಯೂ ಹೆಚ್ಚಾಗುವುದು ಅನಿವಾರ್ಯವಾಗಿದೆ. ಇದರಿಂದಲೂ ಹೊಸ ಬಗೆಯ ದ್ವಿಭಾಷಿಕರು ರೂಪಗೊಳ್ಳುತ್ತಿದ್ದಾರೆ. ಈ ದ್ವಿಭಾಷಿಕ ಬಹುಭಾಷಿಕರಲ್ಲಿ ಕನ್ನಡ ಮೊದಲ ಭಾಷೆಯಾಗಿರುವವರು ಮತ್ತು ಕನ್ನಡ ಎರಡನೆಯ ಅಥವಾ ಆನಂತರದ ಭಾಷೆಯಾಗಿರುವವರು ಎಂದು ಎರಡು ಗುಂಪು ಮಾಡಬಹುದು. ಈ ಎರಡು ಗುಂಪುಗಳ ಕನ್ನಡದ ಬಳಕೆಯ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಈ ವ್ಯತ್ಯಾಸ ಕೇವಲ ತೋರಿಕೆಯದು

ಮಾತ್ರವಲ್ಲ ಗುಣಾತ್ಮಕವಾದ ವ್ಯತ್ಯಾಸಗಳು ಇಲ್ಲವೆ. ಇದರಿಂದಾಗಿಯೂ ಕನ್ನಡದ ಎದುರಿಗೆ ಹೊಸ ಸಮಸ್ಯೆಗಳು ಬಂದು ನಿಲ್ಲತೊಡಗಿವೆ.

ಯಾವುದೇ ದ್ವಿಭಾಷಿಕರಲ್ಲಿ ಕನ್ನಡ ಒಂದು ಭಾಷೆಯಾಗಿದ್ದರೆ ಅವರು ಅದನ್ನು ಬಳಸುವವರು ಎಂದು ತಿಳಿಯಬಹುದು. ಪ್ರತಿಯೊಬ್ಬರ ಬಳಕೆಯ ಸ್ವರೂಪ ಮತ್ತು ಪ್ರಮಾಣಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಕನ್ನಡ ಭಾಷೆ ಒಂದಲ್ಲೊಂದು ಬಗೆಯಲ್ಲಿ ಈ ದ್ವಿಭಾಷಿಕತೆಯ ಪ್ರಯೋಜನವನ್ನು ಪಡೆಯುವ ಭಾಷೆಯಾಗಿರುತ್ತದೆ. ಆದರೆ ಹೊಸ ಸಾಧ್ಯತೆಗಳು ಈಗ ಮೈದಳೆಯುತ್ತಿವೆ. ಪ್ರಬಲ ಭಾಷೆಗಳನ್ನಾಡುವವರು ಕನ್ನಡವನ್ನು ಬೈಪಾಸ್ ಮಾಡಿ ತಮ್ಮ ಭಾಷೆ ಮತ್ತು ಇಂಗ್ಲಿಷ್‌ನಲ್ಲಿ ದ್ವಿಭಾಷಿಕರಾಗುವ ದಾರಿಯನ್ನು ಹಿಡಿದಿದ್ದಾರೆ. ಇದರಿಂದ ಶಿಕ್ಷಿತರ ಒಂದು ವಲಯ ಈಗ ಕನ್ನಡದ ಯಾವ ಕೌಶಲವನ್ನೂ ಪಡೆಯದಿರುವುದು ಸಾಧ್ಯವಾಗಿದೆ. ಒಂದು ವೇಳೆ ಅಂತಹ ಸಾಮರ್ಥ್ಯವನ್ನು, ಕೌಶಲವನ್ನು ಪಡೆದುಕೊಳ್ಳುವ ಒತ್ತಾಯಕ್ಕೆ ಒಳಗಾಗಿದ್ದರೂ ಆ ಕೌಶಲದ ಬಳಕೆಯ ಸನ್ನಿವೇಶಗಳು ಈಗ ಇಲ್ಲವಾಗುತ್ತಿವೆ. ಹೀಗೆ ಕನ್ನಡವನ್ನು ಮೀರಿ ನಿಭಾಯಿಸುವವರು ನಗರಗಳಿಗೆ ಸೀಮಿತವಾಗಿದ್ದರೆಂದು ಅನ್ನಿಸುತ್ತದೆಯಾದರೂ ಬರಲಿರುವ ದಿನಗಳಲ್ಲಿ ಈ ಬಗೆಯ ಜನರ ಸಂಖ್ಯೆ ಮತ್ತು ವ್ಯಾಪ್ತಿ ಅಧಿಕಗೊಳ್ಳುವ ಸಾಧ್ಯತೆ ಇದೆ. ಕನ್ನಡ ಭಾಷೆಯನ್ನು ಮೊದಲ ಭಾಷೆಯಾಗಿ ಹೊಂದಿರುವ ಆದರೆ ಇಂಗ್ಲಿಷ್ ಭಾಷೆಯನ್ನು ಕಲಿತು ದ್ವಿಭಾಷಿಕರಾಗಿರುವವರು ಕನ್ನಡದ ಬಳಕೆಯನ್ನು ಕೇವಲ ಮೌಖಿಕ ನೆಲೆಗೆ ಸೀಮಿತಗೊಳಿಸಿಕೊಳ್ಳುವುದು ಹೆಚ್ಚಾಗುತ್ತಿದೆ. ಅಂದರೆ ಕನ್ನಡ ಭಾಷೆಯನ್ನು ಮಾತನಾಡಿದರೂ ಅದನ್ನು ತಮ್ಮ ಬರವಣಿಗೆಯ ನೆಲೆಗೆ ತರುವುದು ನಿಧಾನವಾಗಿ ಕಡಿಮೆಯಾಗುತ್ತಿದೆ. ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಕನ್ನಡ-ಇಂಗ್ಲಿಷ್ ದ್ವಿಭಾಷಿಕರು ಮತ್ತು ಕನ್ನಡೇತರ ಭಾಷೆ ಇಂಗ್ಲಿಷ್ ದ್ವಿಭಾಷಿಕರು ಜತೆಯಾಗಿಯೇ ಕನ್ನಡದ ಬಳಕೆ ಹೆಚ್ಚಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದು ಮುಂದಿನ ದಶಕಗಳಲ್ಲಿ ಒಂದು ಸವಾಲಾಗಿದೆ.

**ಡಿಜಿಟಲ್ ಯುಗ:** ಸ್ಮಾರ್ಟ್‌ಫೋನ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳ ಹೆಚ್ಚಳದಿಂದಾಗಿ ಓದುವ ಆಸಕ್ತಿ ಕಡಿಮೆಯಾಗಿದೆ. ಆಸಕ್ತಿಯ ಕೊರತೆ: ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ರಮಗಳ ಕೊರತೆ ಮತ್ತು ಸಾಹಿತ್ಯದ ಒಡನಾಟವಿಲ್ಲದ ಜನರನ್ನು ತಲುಪುವಲ್ಲಿನ ಸವಾಲುಗಳು.

**ವಿಷಯಗಳ ಕೊರತೆ:** ವಿಜ್ಞಾನ ಮತ್ತು ತಂತ್ರಜ್ಞಾನದಂತಹ ವಿಷಯಗಳಲ್ಲಿ ಬರೆಯುವವರ ಕೊರತೆ. ಮಾರುಕಟ್ಟೆ ಸಮಸ್ಯೆಗಳು: ತಲುಪುವಿಕೆ: ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿನ ಸವಾಲುಗಳು. ಬರಹಗಾರರ ಕೊರತೆ: ನಿರ್ದಿಷ್ಟ ವಿಷಯಗಳಲ್ಲಿ, ವಿಶೇಷವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬರೆಯುವ ಬರಹಗಾರರ ಕೊರತೆ. ಪರಿಹಾರದ ಪ್ರಯತ್ನಗಳು: ತಂತ್ರಜ್ಞಾನದ ಬಳಕೆ: ಕನ್ನಡ ಸಾಹಿತ್ಯ ಪರಿಷತ್ತು, ಮೊಬೈಲ್ ಅಪ್ಲಿಕೇಶನ್ಗಳಂತಹ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಸಾಹಿತ್ಯವನ್ನು ಜನರಿಗೆ ತಲುಪಿಸಲು ಪ್ರಯತ್ನಿಸುತ್ತಿದೆ. ಆಸಕ್ತಿ ಮೂಡಿಸುವುದು: ಸಾಹಿತ್ಯದ ಬಗ್ಗೆ ಆಸಕ್ತಿ ಇಲ್ಲದವರನ್ನು ಸಾಹಿತ್ಯದತ್ತ ಸೆಳೆಯುವ ಪ್ರಯತ್ನಗಳು ನಡೆಯುತ್ತಿವೆ. ಆಧುನಿಕ ಕನ್ನಡ ಸಾಹಿತ್ಯವು ಡಿಜಿಟಲೀಕರಣ, ಜಾಗತೀಕರಣ, ಮತ್ತು ಮಾಹಿತಿ ತಂತ್ರಜ್ಞಾನದ ಪ್ರಭಾವದಿಂದಾಗಿ ಹೊಸ ಸವಾಲುಗಳನ್ನು ಎದುರಿಸುತ್ತಿದೆ, ಮುಖ್ಯವಾಗಿ ಕನ್ನಡದ ಬಳಕೆಯನ್ನು ಹೆಚ್ಚಿಸುವುದು, ಯುನಿಕೋಡ್‌ನಂತಹ ತಂತ್ರಜ್ಞಾನಗಳನ್ನು ಅಳವಡಿಸುವುದು, ಸಾಮಾಜಿಕ ಜಾಲತಾಣಗಳ ಸದುಪಯೋಗ, ಸಾಹಿತ್ಯ ಸಂಶೋಧನೆಯ ಕುಸಿತ, ಹೊಸ ಬಗೆಯ ಸಾಹಿತ್ಯ ಪ್ರಕಾರಗಳ

ಸೃಷ್ಟಿ, ಮಹಿಳಾ ಸಾಹಿತ್ಯದ ವಿಶ್ಲೇಷಣೆ ಮತ್ತು ಪರಂಪರೆಯೊಂದಿಗೆ ಡಿಜಿಟಲ್ ಯುಗವನ್ನು ಬೆಸೆಯುವಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ.

**ಡಿಜಿಟಲ್ ಮತ್ತು ತಂತ್ರಜ್ಞಾನದ ಸವಾಲುಗಳು:** ಯುನಿಕೋಡ್ ಅಳವಡಿಕೆ: ಕಂಪ್ಯೂಟರ್ ಮತ್ತು ಮೊಬೈಲ್‌ಗಳಲ್ಲಿ ಯುನಿಕೋಡ್ ಕನ್ನಡದ ಬಳಕೆಯ ಪ್ರಮಾಣ ಹೆಚ್ಚಾಗಿದ್ದರೂ, ಒ.ಸಿ.ಆರ್ ತಂತ್ರಾಂಶದ ಅಭಿವೃದ್ಧಿ ಮತ್ತು ಹಸ್ತಪ್ರತಿಗಳ ಡಿಜಿಟಲೀಕರಣ ದೊಡ್ಡ ಸವಾಲಾಗಿದೆ. ಅಂತರ್ಜಾಲದಲ್ಲಿ ಕನ್ನಡ: ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡದ ಪ್ರೆಸೆನ್ಸ್ ಹೆಚ್ಚುತ್ತಿದ್ದರೂ, ಅದನ್ನು ಸಮಾಜದ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಬೇಕಿದೆ. ಇ–ಪುಸ್ತಕಗಳು ಮತ್ತು ಆಡಿಯೋ ಪುಸ್ತಕಗಳು: ಡಿಜಿಟಲ್ ಯುಗದಲ್ಲಿ ಸಾಹಿತ್ಯದ ಸ್ವರೂಪ, ಪ್ರಸರಣ ಮತ್ತು ಗ್ರಹಿಕೆಯಲ್ಲಿ ಬದಲಾವಣೆ ತರಲು ಈ ತಂತ್ರಜ್ಞಾನಗಳ ಅಳವಡಿಕೆ ಮುಖ್ಯ ಸಾಹಿತ್ಯದ ಆಂತರಿಕ ಸಮಸ್ಯೆಗಳು: ಸಂಶೋಧನೆಯ ಕುಸಿತ: ಕನ್ನಡ ಭಾಷಾ ಶಿಕ್ಷಣದಲ್ಲಿ ಸಂಶೋಧನೆಗೆ ಸಂಬಂಧಿಸಿದ ವಿಷಯಗಳ ಕೊರತೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವವರ ಕೊರತೆ. ಸತ್ವಹೀನ ಸಾಹಿತ್ಯ: ಆಧುನಿಕ ಸಾಹಿತ್ಯದ ಸಮೃದ್ಧಿಯಲ್ಲಿ ಕೆಲವು ಸತ್ವಹೀನ ಕೃತಿಗಳು ಬರುತ್ತಿವೆ, ಆದರೆ ಹೊಸ ಜಾಗೃತಿಯೂ ಮೂಡುತ್ತಿದೆ. ರೂಪಕಗಳ ಗೊಂದಲ: ಪಶ್ಚಿಮದ 'ಈವ್'ನಂತಹ ಕಾಮದ ಸಂಕೇತಗಳು ಭಾರತೀಯ ಸಂಸ್ಕೃತಿಯ 'ಕುಂಡಲಿನಿ'ಯಂತಹ ಅರ್ಥವನ್ನು ಕಳೆದುಕೊಂಡು ಗೊಂದಲ ಸೃಷ್ಟಿಸುತ್ತಿವೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸವಾಲುಗಳು: ಮಹಿಳಾ ಸಾಹಿತ್ಯದ ಸಮಸ್ಯೆಗಳು: ಬಾಲ ವೈಧವ್ಯ, ವಿಧವಾ ವಿವಾಹ, ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು, ವೇಶ್ಯಾವೃತ್ತಿ ಇತ್ಯಾದಿಗಳನ್ನು ಆಧುನಿಕ ಮಹಿಳಾ ಸಾಹಿತ್ಯ ಹೇಗೆ ಚಿತ್ರಿಸಿದೆ ಎಂಬ ವಿಶ್ಲೇಷಣೆ ಮುಖ್ಯ. ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ: ಆಧುನಿಕತೆ ಮತ್ತು ಪರಂಪರೆಯ ಮೌಲ್ಯಗಳನ್ನು ಪ್ರಶ್ನಿಸುತ್ತಾ ಹೊಸ ತಳಹದಿಗಳನ್ನು ರೂಪಿಸುವುದು ಒಂದು ಸವಾಲಾಗಿದೆ.

**ಭಾಷಾ ಮತ್ತು ಪ್ರಸರಣ ಸವಾಲುಗಳು:** ಕನ್ನಡ ಭಾಷೆಯನ್ನು ಉಳಿಸುವುದು: ಜಾಗತೀಕರಣದ ಪ್ರಭಾವದಿಂದ ಇಂಗ್ಲಿಷ್ ಪ್ರಾಬಲ್ಯದ ನಡುವೆ ಕನ್ನಡವನ್ನು ಉಳಿಸಿ ಬೆಳೆಸುವುದು, ವಿಶೇಷವಾಗಿ ಮುಂದಿನ ಪೀಳಿಗೆಗೆ ತಲುಪಿಸುವುದು ದೊಡ್ಡ ಜವಾಬ್ದಾರಿ. ಪ್ರಾಚೀನ ಕೃತಿಗಳ ಸಮಸ್ಯೆಗಳು: ನಿಘಂಟುಗಳ ರಚನೆ ಮತ್ತು ಅವುಗಳ ಕುರಿತ ಅಧ್ಯಯನದಲ್ಲಿರುವ ಸಮಸ್ಯೆಗಳು. ಆಧುನಿಕ ಕನ್ನಡ ಸಾಹಿತ್ಯವು ತಂತ್ರಜ್ಞಾನ, ಸಾಮಾಜಿಕ ಬದಲಾವಣೆಗಳು ಮತ್ತು ಸಾಂಸ್ಕೃತಿಕ ಮೌಲ್ಯಗಳ ಸಂಘರ್ಷದ ನಡುವೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ವಿಕಸನಗೊಳ್ಳಲು ಹೊಸ ದಾರಿಗಳನ್ನು ಹುಡುಕುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆಗಳು ಮತ್ತು ಸವಾಲುಗಳು ಮುಖ್ಯವಾಗಿ ವಸಾಹತೋತ್ತರ ಭಾರತದ ವಾಸ್ತವ, ಜಾಗತೀಕರಣದ ಪ್ರಭಾವ, ಸಾಮಾಜಿಕ ನ್ಯಾಯದ ಅನ್ವೇಷಣೆ, ಡಿಜಿಟಲೀಕರಣದ ಸವಾಲುಗಳು, ಮತ್ತು ಸಾಂಪ್ರದಾಯಿಕ ಹಾಗೂ ಆಧುನಿಕ ಮೌಲ್ಯಗಳ ನಡುವಿನ ಸಂಘರ್ಷವನ್ನು ಒಳಗೊಂಡಿವೆ; 'ನವ್ಯೋತ್ತರ' ಚಳುವಳಿಯ ಮೂಲಕ ಸಾಮಾಜಿಕ ಜವಾಬ್ದಾರಿ, ದಲಿತ ಮತ್ತು ಬಂಡಾಯ ಸಾಹಿತ್ಯದ ಉಗಮ, ಮತ್ತು ಪಾಶ್ಚಾತ್ಯೀಕರಣದ ಪ್ರಭಾವದಿಂದಾಗಿ ಹೊಸ ಸಾಹಿತ್ಯ ಪ್ರಕಾರಗಳ ಹುಟ್ಟು ಮತ್ತು ಆಧುನಿಕತೆಯ ನಿರಾಕರಣೆ ಇವು ಮುಖ್ಯ ಸವಾಲುಗಳಾಗಿವೆ.

**ಮುಖ್ಯ ಸಮಸ್ಯೆಗಳು ಮತ್ತು ಸವಾಲುಗಳು:** ನವ್ಯೋತ್ತರದ ಪ್ರತಿಕ್ರಿಯೆ ಮತ್ತು ಸಾಮಾಜಿಕ ಜವಾಬ್ದಾರಿ: ನವ್ಯ' ಸಾಹಿತ್ಯದ ಬೌದ್ಧಿಕತೆ ಮತ್ತು ವೈಯಕ್ತಿಕತೆಗೊಂದು ಪ್ರತಿಕ್ರಿಯೆಯಾಗಿ 'ನವ್ಯೋತ್ತರ' ಚಳುವಳಿ ಬಂತು. ಲೇಖಕರು ಕೇವಲ ಕಲೆಗಾಗಿ ಕಲೆ ಎಂದು

ಹೇಳದೆ, ಸಾಮಾಜಿಕ ಜವಾಬ್ದಾರಿ ಮತ್ತು ವಾಸ್ತವ ಬದುಕಿನ ಚಿತ್ರಣಕ್ಕೆ ಒತ್ತು ನೀಡಿದರು. ಉದಾಹರಣೆ: ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ. ದಲಿತ ಮತ್ತು ಬಂಡಾಯ ಸಾಹಿತ್ಯದ ಉದಯ: ದಲಿತರು ಮತ್ತು ಅಂಚಿಗೆ ನೂಕಲ್ಪಟ್ಟ ಸಮುದಾಯಗಳ ಅನುಭವಗಳು ಸಾಹಿತ್ಯದ ಮುಖ್ಯವಾಹಿನಿಗೆ ಬಂತು. ಇದು ಸಾಮಾಜಿಕ ಅಸಮಾನತೆ, ಅನ್ಯಾಯ ಮತ್ತು ದೌರ್ಜನ್ಯಗಳ ಕುರಿತು ಬಲವಾಗಿ ಮಾತನಾಡಿತು. ನವ್ಯ ಸಾಹಿತ್ಯದ ನಂತರದ ಗೊಂದಲ: ನವ್ಯ ಸಾಹಿತ್ಯದ ವೈಯಕ್ತಿಕ ನಿರಾಶೆ ಮತ್ತು ಬೌದ್ಧಿಕ ಪ್ರಯೋಗಗಳ ನಂತರ, ಸಾಹಿತ್ಯದ ದಿಕ್ಕು ಯಾವುದು ಎಂಬ ಪ್ರಶ್ನೆ. ನವ್ಯದ ವಿಫಲತೆ ಮತ್ತು ನಿರಾಶೆಯಿಂದಾಗಿ, ನವ್ಯೋತ್ತರದಂತಹ ಹೊಸ ಮಾರ್ಗಗಳನ್ನು ಹುಡುಕುವ ಅಗತ್ಯ.

**ಪಾಶ್ಚಾತ್ಯೀಕರಣ ಮತ್ತು ಜಾಗತೀಕರಣದ ಪ್ರಭಾವ:** ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದಾಗಿ ಹೊಸ ತಂತ್ರಗಳು ಮತ್ತು ಶೈಲಿಗಳ ಅಳವಡಿಕೆ. ಜಾಗತೀಕರಣದ ಪ್ರಭಾವದಿಂದ ಕನ್ನಡದ ಮೂಲ ಅಸ್ಮಿತೆ ಮತ್ತು ಭಾಷೆಯ ಉಳಿವಿನ ಬಗ್ಗೆ ಆತಂಕ. ಡಿಜಿಟಲೀಕರಣ ಮತ್ತು ಹೊಸ ತಂತ್ರಜ್ಞಾನದ ಸವಾಲು: ಸಾಹಿತ್ಯ ರಚನೆ, ಪ್ರಸಾರ ಮತ್ತು ವಿಮರ್ಶೆಯಲ್ಲಿ ಡಿಜಿಟಲ್ ಮಾಧ್ಯಮಗಳ ಪ್ರವೇಶ. ಹಳೆಯ ಸಾಹಿತ್ಯ ಪರಂಪರೆಯನ್ನು ಡಿಜಿಟಲ್ ಯುಗಕ್ಕೆ ಒಳತರುವ ಸವಾಲು. ವಲಸೆ ಮತ್ತು ನಗರ ಜೀವನದ ಸಮಸ್ಯೆಗಳು: ಗ್ರಾಮೀಣ ಬದುಕಿನಿಂದ ನಗರಗಳಿಗೆ ವಲಸೆ ಹೋಗುವ ಜನರ ಅನುಭವಗಳು, ಮಾನಸಿಕ ಸಂಘರ್ಷಗಳು ಮತ್ತು ಸಾಮಾಜಿಕ ಸಮಸ್ಯೆಗಳು ಸಾಹಿತ್ಯದ ಮುಖ್ಯ ವಿಷಯಗಳಾದವು. ಸಾಹಿತ್ಯ ಪ್ರಕಾರಗಳಲ್ಲಿನ ಬದಲಾವಣೆ: ಕವಿತೆಗಿಂತ ಕಾದಂಬರಿ ಮತ್ತು ಸಣ್ಣಕಥೆಗಳು ಪ್ರಮುಖ ಸ್ಥಾನ ಪಡೆದವು. ನಾಟಕ ಸಾಹಿತ್ಯದ ಬೆಳವಣಿಗೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಆಧುನಿಕೋತ್ತರ ಕನ್ನಡ ಸಾಹಿತ್ಯವು ನವ್ಯದ ನಂತರದ ಸವಾಲು, ಸಾಂಪ್ರದಾಯಿಕ ಮೌಲ್ಯಗಳ ಪುನರ್ವಿಮರ್ಶೆ, ಸಾಮಾಜಿಕ ನ್ಯಾಯದ ಹುಡುಕಾಟ ಮತ್ತು ಆಧುನಿಕ ಜಗತ್ತಿನ ವಾಸ್ತವಗಳೊಂದಿಗೆ ಸಂಘರ್ಷ ನಡೆಸುತ್ತಾ ಹೊಸ ರೂಪಗಳನ್ನು ಪಡೆಯಿತು. ವೈಜ್ಞಾನಿಕ ಸಾಧನಗಳು ಸಾಹಿತ್ಯ ಕೃತಿಗಳ ಹಿರಿಮೆ ಗರಿಮೆಗಳನ್ನು ಮಣ್ಣು ಮುಕ್ಕಿಸಲು, ಸಾರ್ವಭೌಮತ್ವವನ್ನು ಆಕ್ರಮಿಸಲು ನಾಗಾಲೋಟದಿಂದ ಮುನ್ನುಗ್ಗುತ್ತಿವೆ. ಇಂದಿನ ಆಧುನಿಕ ಮಾನವನಿಗೆ ಪುಸ್ತಕಗಳನ್ನು ಓದಲು ಬೇಕಾಗಿರುವ ಬಿಡುವು, ಏಕಾಗ್ರತೆ ಎಲ್ಲಿದೆ? ಬದುಕಿನ ನಿಷ್ಠುರ ವಾಸ್ತವತೆಯ ಎದುರಿಗೆ ವಿಶ್ರಾಂತಿಗೆ ಅವಕಾಶವೇ ಇಲ್ಲ. ಎಲ್ಲದರಲ್ಲೂ ತ್ವರಿತ, ಆತುರ, ಸ್ಪರ್ಧೆ, ಸಕಲವು ಸುಲಭದಲ್ಲಿ ಸಲ್ಲಬೇಕು ಎನ್ನುವ ಅಭಿಲಾಷೆಯ. ಆಧುನಿಕ ಮನುಷ್ಯನ ತ್ವರಿತ ಆಕಾಂಕ್ಷೆಗಳನ್ನು ಪೂರೈಸಲು ಟಿ.ವಿ., ವಿಡಿಯೋ, ಆಡಿಯೋ ಕಂಪ್ಯೂಟರ್‌ಗಳು ಮತ್ತಿತರ ವಿದ್ಯುನ್ಮಾನ ಮಾಧ್ಯಮಗಳು ಟೊಂಕಕಟ್ಟಿ ನಿಂತಿವೆ. ಮುದ್ರಿತ ಗ್ರಂಥಗಳ ಭವಿಷ್ಯ ಡೋಲಾಯಮಾನ ಸ್ಥಿತಿಯನ್ನು ತಲುಪಿವೆ. ಆದಾಗ್ಯೂ ಇಂದಿಗೂ ಸಾಹಿತ್ಯ ಕೈಗೊಂಡಿರುವ ಕೆಲವು ವಿಷಯಗಳು ಅತ್ಯಾಧುನಿಕ ಯಂತ್ರಸಾಧನಗಳಿಂದ ನೆರವೇರಲು ಸಾಧ್ಯವಿಲ್ಲ. ಜನತೆ ಎಲ್ಲಿದ್ದರೂ, ಯಾವ ಹೊತ್ತಿನಲ್ಲಾದರೂ ಎಂಥ ಬಗೆಯ ಪ್ರಯಾಣ ಕೈಗೊಂಡಿದ್ದರೂ ಪುಸ್ತಕವನ್ನು ಕೊಂಡೊಯ್ಯಬಹುದು, ಇಷ್ಟವಾದುದನ್ನು ಓದಿ ಆನಂದಿಸಬಹುದು. ಯಾರದೇ ಮರ್ಜಿ ಮುಲಾಜಿಗಳಿಗೆ ಒಳಗಾಗುವಂತಿಲ್ಲ. ಸಾಹಿತ್ಯ ಕೃತಿಗಳು ಯಾವಾಗ ಬೇಕಾದರೂ ಆಜ್ಞೆಯನ್ನು ಪೂರೈಸುವ ಸುರಲೋಕದ ಕಾಮಧೇನುವಿನಂತೆ ಎಂದು ಹೇಳಬಹುದು.

ಆಧುನಿಕ ಮಾಹಿತಿ ತಂತ್ರಜ್ಞಾನದ ಡಿಜಿಟಲ್ ಯುಗದಲ್ಲಿ ಕನ್ನಡ ಸಾಹಿತ್ಯ ಗಂಭೀರವಾದ ಸವಾಲನ್ನು ಎದುರಿಸಬೇಕಾದ ಸ್ಥಿತಿಗೆ ತಲುಪಿದೆ. ಸಂವಹನ ಕ್ಷೇತ್ರದಲ್ಲಾಗಿರುವ

ಕ್ರಾಂತಿ, ವಿವಿಧ ರಾಜಕೀಯ ಪ್ರಣಾಲಿಗಳ ಒತ್ತಡ, ತೀವ್ರಗತಿಯಲ್ಲಿ ನಡೆದಿರುವ ರಾಷ್ಟ್ರದಲ್ಲಿಯ ನಗರೀಕರಣ, ಔದ್ಯೋಗೀಕರಣ, ಜಾಗತೀಕರಣ, ಗಣಕೀಕರಣ, ಶಿಕ್ಷಣದ ವಿಸ್ತಾರ, ಹೊರಜಗತ್ತಿನಿಂದ ಬರುವ ವೈಚಾರಿಕ ಹಾಗೂ ಸಾಹಿತ್ಯಕ ಆಂದೋಲನಗಳ ಪ್ರಭಾವ ಇತ್ಯಾದಿಗಳಿಂದಾಗಿ ಇಲ್ಲಿಯ ಜೀವನ ದೃಷ್ಟಿ ಹಾಗೂ ಸಾಹಿತ್ಯಕ ಚಟುವಟಿಕೆಗಳು ತ್ವರಿತವಾಗಿ ಬದಲಾಗಬೇಕಾದ ಸಾಧ್ಯತೆ ಇದೆ. ಆಧುನಿಕ ಜಗತ್ತಿನಲ್ಲಿ ಸಾಹಿತ್ಯದ ಓದಿನ ಬಗೆಗಿನ ಸಹಜ ಕಳಕಳಿ, ಇನ್ನಿತರ ಆಕರ್ಷಣೆಗಳ ದೆಸೆಯಿಂದ ಕಳೆಗುಂದಿದೆ ಎನ್ನಬಹುದು. ಬದಲಾಗುತ್ತಿರುವ ಜೀವನಶೈಲಿಯ ಇಂದಿನ ಜನತೆಗೆ ಸಾಹಿತ್ಯದ ಅವಶ್ಯಕತೆ ಹಿಂದಿನಷ್ಟೇ ಇದೆಯೇ? ಒಂದು ವೇಳೆ ಇದ್ದ ಪಕ್ಷದಲ್ಲಿ ಇಂದಿನ ಅಗತ್ಯಗಳಿಗೆ ಅನುಸಾರವಾಗಿ ಅದನ್ನು ಪೂರೈಸುವ ಬಗೆ ಹೇಗೆ? ಸಮಕಾಲೀನ ಮತ್ತು ಮುಂದಿನ ಭವಿಷ್ಯದಲ್ಲಿ ಮುದ್ರಿತ ಪುಸ್ತಕಗಳಿಗೆ ಮುಂಚೆ ಇದ್ದ ಸ್ಥಾನಮಾನ ಸಾಧ್ಯವೇ? ಡಿಜಿಟಲ್ ಯುಗದ ಶ್ರೀಸಾಮಾನ್ಯನಿಗೆ ಬೇಕಾಗುವ ಸಾಹಿತ್ಯದ ಸ್ವರೂಪ ಎಂತಹದ್ದು? ಈ ಪ್ರಶ್ನೆಗಳು ಇಂದು ನಮ್ಮೆದುರಿಗೆ ಸವಾಲಾಗಿ ನಿಂತಿವೆ. ಚಿಂತನೆಗೆ ಒಳಗುಮಾಡಿವೆ. ವೈಜ್ಞಾನಿಕ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಹೊಂದಿ ವಿಶಿಷ್ಟ ಕಾರ್ಯಕ್ಷೇತ್ರಕ್ಕೆ ಅಂಟಿಕೊಂಡ ವ್ಯಕ್ತಿಗಳು ಸಾಹಿತ್ಯ ಕಲೆಗಳ ವಿಷಯದಲ್ಲಿ ಅಜ್ಞರಲ್ಲದಿದ್ದರೂ ಅನಭಿಜ್ಞರು. ಇವರಿಗೆ ಸಾಹಿತ್ಯ ಎಂದರೆ ಜೀವನದ ಪ್ರಖರ ವಾಸ್ತವ್ಯಕ್ಕೆ ಪ್ರತಿಯಾಗಿ ನಿಂತು ಕಂಗೆಡಿಸುವ ವ್ಯರ್ಥ ಕಲ್ಪನಾವಿಲಾಪ. ಸಾಹಿತ್ಯದ ಬಗೆಗೆ ತಲೆಕೆಡಿಸಿಕೊಳ್ಳುವುದು ಸಮಯದ ಅಪವ್ಯಯದಂತೆ ಅನಿಸಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಕಲೆಗಳು ಜನರ ಬದುಕಿಗೆ ವಿಜ್ಞಾನ, ತಂತ್ರಜ್ಞಾನಗಳಷ್ಟೆ ಅತಿ ಅನಿವಾರ್ಯವೇ? ಒಂದು ನಿರ್ದಿಷ್ಟ ಕಾಲಮಾನದ ನಾಗರಿಕತೆಗೆ ಐಹಿಕ ಬಾಳ್ವೆಯ ಸೌಕರ್ಯ ಸಮೃದ್ಧಿಗಳಿಗೆ ಸಾಹಿತ್ಯ ಸಂಗೀತಾದಿ ಕಲೆಗಳ ಕೊಡುಗೆ ಎಷ್ಟು ಮಹತ್ವದ್ದು ಎನ್ನುವುದರ ಜಿಜ್ಞಾಸೆ. ತಂತ್ರಜ್ಞಾನ ಜಗತ್ತಿನಲ್ಲಿ ಕನ್ನಡದ ಮಾರುಕಟ್ಟೆ ಬೆಳೆಯುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ. ಟೆಕ್ ಲೋಕದಲ್ಲಿ ಕನ್ನಡ ಬೆಳೆಯುವ ನಿಟ್ಟಿನಲ್ಲಿ ಸಮುದಾಯದ ಕೊಡುಗೆಯೂ ದೊಡ್ಡಮಟ್ಟದ್ದಾಗಿದ್ದು ಅವು ಮಾಡಿರುವ ಕೆಲಸವನ್ನು ಕನ್ನಡ ಜನತೆಗೆ ತಿಳಿ ಹೇಳುವುದರ ಜೊತೆಗೆ ಪ್ರಶಂಸಿಸಬೇಕಾಗಿದೆ. ಕನ್ನಡ ವಿಕಿಪೀಡಿಯದಂತಹ ವೇದಿಕೆಯ ಮಹತ್ವದ ಬಗೆಗೆ ಇಂದು ಜನತೆಯಲ್ಲಿ ಅರಿವು ಮೂಡಿಸಬೇಕಾಗಿದೆ.

**ಉಪಸಂಹಾರ:**

ಈ ಹೊಸ ಶತಮಾನದಲ್ಲಿ ಕನ್ನಡ ಈ ಹಿಂದಿನಿಂದಲೂ ಎದುರಿಸುತ್ತಿರುವ ಕೆಲವು ಸಮಸ್ಯೆಗಳ ಭಾರದೊಡನೆ ಹೊಸದಾದ ಕೆಲವು ಸವಾಲುಗಳ ಬಗ್ಗೆ ಅರಿವನ್ನೂ ಪಡೆಯುವುದು ಚಿಂತಿಸುವುದಕ್ಕಿಂತಲೂ ಮುಖ್ಯವಾದ ಸಂಗತಿ. ಏಕೆಂದರೆ ಎಷ್ಟೋ ವೇಳೆ ಸಮಸ್ಯೆಗಳ ಸ್ವರೂಪವನ್ನು ಅರಿಯುವುದೆಂದರೇ ಆ ಸಮಸ್ಯೆಯನ್ನು ಬಹುಪಾಲು ಬಿಡಿಸಿದಂತೆಯೇ ಸರಿ. ಉಚಿತವಾಗಿ ಲಭ್ಯವಿರುವ ಮುಕ್ತ ತಂತ್ರಾಂಶಗಳನ್ನು ಕನ್ನಡಕ್ಕೆ ತರುವುದರಲ್ಲಿ, ಆಸಕ್ತ ಕನ್ನಡಿಗರ ಗುಂಪುಗಳು ಹಲವು ಮಹತ್ವದ ಸಾಧನೆಗಳನ್ನು ಮಾಡಿವೆ ಅವುಗಳ ಸಾಧನೆಯನ್ನು ಗುರುತಿಸಬೇಕಾಗಿದೆ. ಇಂದು ಈ ತೆರನಾದ ತಾಂತ್ರಿಕ ಕೆಲಸ ಮಾಡುವ ಇಂತಹ ಸಮುದಾಯಗಳೊಡನೆ ಕೈಜೋಡಿಸುವುದು, ಹೊಸ ಪ್ರಯತ್ನಗಳನ್ನು ಬೆಂಬಲಿಸುವುದು ನಾವೆಲ್ಲರೂ ಮಾಡಬೇಕಾದ ಕೆಲಸವಾಗಬೇಕಾಗಿದೆ. ಅದರ ಮೂಲಕ ಮಾಹಿತಿ ತಂತ್ರಜ್ಞಾನ ಜಗತ್ತಿನಲ್ಲಿ ಕನ್ನಡ ಭಾಷೆಯ ಅಸ್ತಿತ್ವವನ್ನು ಉಳಿಸಿಕೊಳ್ಳುವುದರ ಜೊತೆಗೆ ಸದೃಢವಾಗಿ ಬೆಳಸಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ರಾಮಕೃಷ್ಣ ಜಿ., (2003), ವೈಜ್ಞಾನಿಕ ಮನೋಧರ್ಮ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಹೊನ್ನುಸಿದ್ಧಾರ್ಥ ಸಿ. ಬಿ., (2014), ಜಿ.ಎಸ್. ಶಿವರುದ್ರಪ್ಪನವರ ಸಮಗ್ರ ಸಾಹಿತ್ಯ ಅವಲೋಕನ, ಬೆಂಗಳೂರು: ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.
3. ಜವರೇಗೌಡ ದೇ., (2008), ಕನಕಾವಲೋಕನ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
4. ಹೊನ್ನುಸಿದ್ಧಾರ್ಥ ಸಿ. ಬಿ., (2014), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಐಸಿರಿ ಪ್ರಕಾಶನ.
5. ಶಂಕರ ಭಟ್ ಡಿ. ಎನ್., (1999), ಭಾಷೆಯ ಬಗೆಗೆ ನೀವೇನು ಬಲ್ಲಿರಿ?, ಮೈಸೂರು: ಭಾಷಾ ಪ್ರಕಾಶನ.
6. ಶ್ಯಾಮರಾವ್ ಜೆ. ಎನ್., (2008), ಶಾಸ್ತ್ರೀಯ ಭಾಷೆ ನಡೆದು ಬಂದ ದಾರಿ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
7. ರಾಮಚಂದ್ರನ್ ಸಿ. ಎನ್., (2002), ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
8. ಗಂಗಾಧರ ಬಿ., (2019), ಕನ್ನಡ ಸಹಯೋಗಿ, ಕೋಲಾರ: ಪ್ರಸಾರಾಂಗ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ.
9. ಶಾರದಾಪ್ರಸಾದ್ ಎಚ್. ವೈ., (2007), ಎಲ್ಲ ಬಲ್ಲವರಿಲ್ಲ, ಬೆಂಗಳೂರು: ಅಭಿನವ ಪ್ರಕಾಶನ.
10. ಪೂರ್ಣಚಂದ್ರ ತೇಜಸ್ವಿ ಕೆ. ಪಿ., (2009), ಅಣ್ಣನ ನೆನಪು, ಮೈಸೂರು: ಉದಯರವಿ ಪ್ರಕಾಶನ.
11. ಗಂಗಾಧರ ಬಿ., (2020), ಕನ್ನಡ ಉತ್ಸವ, ಕೋಲಾರ: ಪ್ರಸಾರಾಂಗ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ.
12. ಜಯಲಕ್ಷ್ಮೀ ಸೀತಾಪುರ, (2012), ನಮ್ಮ ಸುತ್ತಿನ ಜನಪದ ಕಥನ ಗೀತೆಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
13. ಗವೀಶ ಹಿರೇಮಠ, (2008), ಜಾಗತೀಕರಣ ಮತ್ತು ಜಾನಪದ, ಗದಗ: ಕಣವಿ ಪ್ರಕಾಶನ.
14. ಕುವೆಂಪು, (2004), ಮಲೆಗಳಲ್ಲಿ ಮದುಮಗಳು, ಮೈಸೂರು: ಉದಯರವಿ ಪ್ರಕಾಶನ.
15. ಹೊನ್ನುಸಿದ್ಧಾರ್ಥ ಸಿ. ಬಿ., (2014), ಸುವರ್ಣ ಸಂಪದ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.